**<u>ದಿನಾಂಕಃ 13.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು:- ಪ್ರತಿವಾದಿ ಪರ ಶ್ರೀ ಕೆ.ಟಿ.ಟಿ. ವಕೀಲರಿಂದಃ</u>**

1) ಈ ಪ್ರಕರಣ ದಾಖಲಿಸುವ ಪೂರ್ವದಲ್ಲಿ ನನಗೆ ಪ್ರತಿವಾದಿಯು ಒಂದು ನೋಟೀಸನ್ನು ನೀಡಿದ್ದರು ಎಂದರೆ ಸರಿ. ಸದರಿ ನೋಟೀಸಿಗೆ ನಾನು ಪ್ರತ್ಯುತ್ತರ ನೋಟೀಸನ್ನು (ನಿಪಿ.2) ನೀಡಿರುತ್ತೇನೆ. ಸದರಿ ಪ್ರತ್ಯುತ್ತರ ನೋಟೀಸಿನಲ್ಲಿ ಪ್ರತಿವಾದಿಯ 2008 ರಲ್ಲಿ ಎಷ್ಟು ಬಾಡಿಗೆ ಹಣಕ್ಕಾಗಿ ಅವರು ಬಂದಿದ್ದರು ಮತ್ತು ಎಷ್ಟು ಬಾಡಿಗೆ ಹಣವನ್ನು ಅವರು ನೀಡಿರುತ್ತಾರೆ ಎಂದು ತಿಳಿಸಿರುವುದಿಲ್ಲ. ನಿಪಿ.4 ರಲ್ಲಿ ಪ್ರತಿವಾದಿಯು ಎಷ್ಟು ಬಾಡಿಗೆ ಹಣವನ್ನು ನೀಡಿರುತ್ತಾರೆ ಮತ್ತು ಎಷ್ಟು ಬಾಕಿ ಇರುತ್ತದೆ ಎಂಬುದನ್ನು ನಮೂದು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಅದರಲ್ಲಿ ಸೆಪ್ಟೆಂಬರ್ 2018 ರವರೆಗೂ ಬಾಡಿಗೆ ಹಣ ಬಂದಿದರುವುದಾಗಿ ನಮೂದು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಸೆಪ್ಟೆಂಬರ್ 2018 ರ ವರೆಗೂ ಬಾಡಿಗೆ ಹಣ ನೀಡಿದ ಸಮಯದಲ್ಲಿ ನಿಪಿ. 15 ಮತ್ತು 16 ರ ಚೆಕ್ಕುಗಳ ಬಗ್ಗೆ ನನಗೆ ತಿಳುವಳಿಗೆ ಇತ್ತು. ಸಾಕ್ಷಿಯು ಸದರಿ ಚೆಕ್ಕುಗಳು ಕಳೆದು ಹೋಗಿತ್ತು ಎಂದು ನುಡಿಯುತ್ತಾರೆ. ಆ ರೀತಿ ಚೆಕ್ಕುಗಳು ನನ್ನ ಬಳಿ ಬಂದಿದ್ದು ಅವುಗಳು ನಂತರದಲ್ಲಿ ಕಳೆದು ಹೋಗಿರುತ್ತವೆ ಎಂಬ ವಿಚಾರವನ್ನು ಅಸಲು ದಾವಾ ಸಂಖ್ಯೆ 45/2019 ರ ಪ್ರತಿವಾದ ಪತ್ರದಲ್ಲಿ ನಮೂದಿಸಲು ತೊಂದರೆ ಇರಲಿಲ್ಲ.

2) ಈ ಪ್ರಸ್ತುತ ಪ್ರಕರಣದ ವಾದ ಪತ್ರದಲ್ಲಿ ಪ್ರತಿವಾದಿಯು ನಿಗದಿತವಾಗಿ ಎಷ್ಟು ಮೊತ್ತಕ್ಕೆ ಬಾಡಿಗೆಗೆ ಬಂದಿದ್ದರು ಎಂದು ತಿಳಿಸಿರುತ್ತೇನೆ. ನಿಪಿ.15 ಮತ್ತು 16 ರ ಚೆಕ್ಕುಗಳನ್ನು ನನಗೆ ನೀಡಿದ ಕಾಲಕ್ಕೆ ಮೂರುವರೆ ವರ್ಷಗಳ ಬಾಡಿಗೆ ಹಣ ಬಾಕಿ ಇತ್ತು. ನಿಪಿ.15 ಮತ್ತು 16 ರ ಚೆಕ್ಕುಗಳನ್ನು ನೀಡಿದ ನಂತರ 4-5 ದಿನಗಳಲ್ಲಿಯೇ ಪ್ರತಿವಾದಿ ನನಗೆ ಬಾಡಿಗೆ ಹಣವನ್ನು ನಗದು ರೂಪದಲ್ಲಿ ನೀಡಿದ್ದರು. ಆ ರೀತಿ ಹಣ ನೀಡಿದ ಸಂಬಂಧ ನಾನು ರಶೀದಿಯನ್ನು ನೀಡಿರುವುದಿಲ್ಲ. ಪ್ರತಿವಾದಿಯು ನನಗೆ 50 ಸಾವಿರ ಹಣವನ್ನು ನೀಡಿದ್ದು ಆ ರೀತಿ ಹಣ ನೀಡುವ ಕಾಲಕ್ಕೆ ಬೇರೆ ಯಾರೂ ಇರಲಿಲ್ಲ. ಆ ರೀತಿ ಪ್ರತಿವಾದಿ ನೀಡಿದ ಹಣವು ನನಗೆ ಬರಬೇಕಿದ್ದ ಬಾಡಿಗೆ ಹಣದ ಪೈಕಿ ಸೆಪ್ಟೆಂಬರ್ 2018 ರವರೆಗೂ ಸಂಪೂರ್ಣವಾಗಿ ತೀರುವಳಿ ಆಗಿತ್ತು. ಕ್ರಯ ಪತ್ರವನ್ನು ಬರೆದುಕೊಡುವಂತೆ ಪ್ರತಿವಾದಿ ನನ್ನನ್ನು ಕೇಳಿದಾಗ ಸ್ವತ್ತಿನ ಬೆಲೆ ಹೆಚ್ಚು ಆಗಿರುವ ಕಾರಣ ಹೆಚ್ಚುವರಿಯಾಗಿ ಹಣ ನೀಡಿದ್ದಲ್ಲಿ ಕ್ರಯ ಪತ್ರ ಬರೆದುಕೊಡುವುದಾಗಿ ಹೇಳಿದ ಕಾರಣ ಪ್ರತಿವಾದಿ ನಿಪಿ.15 ಮತ್ತು 16 ರ ಚೆಕ್ಕುಗಳನ್ನು

ನೀಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.16 ರ ಚೆಕ್ಕಿನಲ್ಲಿ ದಿನಾಂಕ ತಿದ್ದುಪಡಿ ಆಗಿದ್ದ ಕಾರಣ ಅದು ನಗದು ಆಗಿರಲಿಲ್ಲ ಆದ್ದರಿಂದ ಪ್ರತಿವಾದಿಯು ನಿಪಿ.15 ರ ಇನ್ನೊಂದು ಚೆಕ್ಕನ್ನು ನನಗೆ ನೀಡಿದ್ದು, ನಾನು ಆ ಎರಡೂ ಚೆಕ್ಕುಗಳನ್ನು ಇಟ್ಟುಕೊಂಡು ಪ್ರತಿವಾದಿಯ ಬಳಿ ನಗದು ಹಣವನ್ನು ಕೇಳಿದ ಕಾರಣ ಆತ ನನಗೆ ನಗದು ರೂಪದಲ್ಲಿ 50 ಸಾವಿರ ಹಣವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ.

3) ನಿಪಿ.15 ಮತ್ತು 16 ರ ಚೆಕ್ಕುಗಳನ್ನು ನೀಡಿದ ನಂತರವೂ ಪ್ರತಿವಾದಿ ನನಗೆ ರೂ.50 ಸಾವಿರ ಹಣವನ್ನು ನೀಡಿರುತ್ತಾರೆ. ಸದರಿ ಹಣವನ್ನು ಬಾಡಿಗೆ ಸಂಬಂಧ ನನಗೆ ನೀಡಿರುತ್ತಾರೆ. ಆ ಹಣವನ್ನು ಬಾಡಿಗೆಗಾಗಿ ನೀಡಿಲ್ಲ ಮತ್ತು ನಾನು ಸ್ವತ್ತಿಗೆ ಹೆಚ್ಚುವರಿ ಹಣ ನೀಡುವಂತೆ ಕೇಳಿದ ಕಾರಣ ಪ್ರತಿವಾದಿ ನನಗೆ 50 ಸಾವಿರ ಹಣವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಆ ರೀತಿ ಹಣ ಪಡೆದುಕೊಂಡ ನಂತರವೂ ಸಹ ಪ್ರತಿವಾದಿಗೆ ನಾನು ಕ್ರಯ ಪತ್ರ ಮಾಡಿಕೊಡದ ಕಾರಣ ಆತ ನನ್ನ ವಿರುದ್ಧ ಒಂದು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸಾಕ್ಷಿಯು ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ ಎಂದು ನುಡಿಯುತ್ತಾರೆ.

4) ನಿಪಿ.4 ರ ನೋಟೀಸಿನಲ್ಲಿ ಪ್ರತಿವಾದಿಯು ನೀಡಿರುವ 50 ಸಾವಿರ ಹಣವು ಸೆಪ್ಟಂಬರ್ 2018 ರವರೆಗಿನ ಬಾಡಿಗೆ ಹಣಕ್ಕೆ ಚುಕ್ತ ಆಗಿದೆ ಎಂದು ಬರೆಸಿರುವುದಿಲ್ಲ ಎಂದರೆ ಸರಿ. ನಿಪಿ.4 ರ ನೋಟೀಸಿನಲ್ಲಿ ಬಾಡಿಗೆ ಕರಾರನ್ನು ಯಾವಾಗ ರದ್ದು ಪಡಿಸುತ್ತೇವೆ ಎಂದು ನಮೂದು ಮಾಡಿಲ್ಲ ಎಂದರೆ ಸರಿ. ಹೆಚ್ಚಿನ ಹಣದ ಆಸೆಗಾಗಿ ಉದ್ದೇಶಪೂರ್ವಕವಾಗಿ ಕ್ರಯ ಪತ್ರವನ್ನು ಬರೆದುಕೊಡದೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಯಾವತ್ತೂ ಸಹ ನಿಪಿ.15 ಮತ್ತು 16 ರ ಚೆಕ್ಕುಗಳನ್ನು ಬಾಡಿಗೆ ನೀಡುವ ಉದ್ದೇಶದಿಂದ ನನಗೆ ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**